**4**

# ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ

ನಂ. 1, ಅಲಿ ಆಸ್ಕರ್ ರಸ್ತೆ, ಬೆಂಗಳೂರು

ಸಂಖ್ಯೆ: ಆರ್‌ಎಸ್‌ಆರ್/ಸೌಕಾ/164/ಎಕ್ಸ್‌ಎಂಸಿ/2003–04

ಗೆ, ದಿನಾಂಕ : 6.12.2003

**ವ್ಯವಸ್ಥಾಪಕ ನಿರ್ದೇಶಕರು,**
ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು

**ಮಾನ್ಯರೇ,**

**ವಿಷಯ:** ಡಿಸಿಸಿ ಬ್ಯಾಂಕುಗಳ ಸದಸ್ಯತ್ವಕ್ಕೆ ಹಾಗೂ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಕೋರಿ.

**ಉಲ್ಲೇಖ:** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಪತ್ರ ಸಂಖ್ಯೆ : 2/17/2003–04 ದಿನಾಂಕ 3.10.2003

ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 1.1.2001 ರಿಂದ ಜಾರಿಗೆ ತಂದ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ 1997ರಡಿ ನೋಂದಣಿಯಾದ ಸಹಕಾರಿಗಳಿಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸದಸ್ಯತ್ವ ನೀಡಲು ನಿರಕಾರಿಸುತ್ತಿರುವ ಬಗ್ಗೆ ಉಲ್ಲೇಖದ ಪತ್ರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಈ ಕಛೇರಿಯ ಗಮನಕ್ಕೆ ತಂದು ಈ ಕುರಿತು ಗೊಂದಲ ನಿವಾರಿಸಲು ಕೋರಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 16(1) (ಇ) ನಂತೆ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ರಚಿತವಾದ ಒಂದು ಸಂಸ್ಥೆ ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆಯಬಹುದಾಗಿದ್ದು. ಈ ಅನ್ವಯ ಸೌಹಾರ್ದ ಸಹಕಾರಿಗಳಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ಸದಸ್ಯತ್ವ ನೀಡಬಹುದಾಗಿದೆ ಎಂದು ಸ್ಪಷ್ಟೀಕರಿಸಲಾಗಿದೆ. ಈ ಸಹಕಾರಿಗಳಿಗೆ ಸಾಲ ಮತ್ತಿತರ ಸೌಲಭ್ಯಗಳನ್ನು ನೀಡುವ ಬಗ್ಗೆ ಆಯಾ ಜಿಲ್ಲಾ ಬ್ಯಾಂಕುಗಳ, ಆಡಳಿತ ಮಂಡಳಿಗಳು ಚಾಲ್ತಿಯಲ್ಲಿರುವ ನಬಾರ್ಡ ಮತ್ತು ಆರ್.ಬಿ.ಐ. ರವರು ನೀಡಿರುವ ಸೂಚನೆಗಳಂತೆ ನಿರ್ಣಯಿಸಿ ಅರ್ಹ ಮುಂದಿನ ಕ್ರಮವಿಡಬಹುದಾಗಿದೆಯೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ, ಸಹಿ/–

**ಸಹಕಾರಿಗಳ ಸಂಯುಕ್ತ ನಿಬಂಧಕರು**
(ಕೇಂದ್ರ ಸ್ಥಾನ)